ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಂ.ಜಿ. ಉಮಾ

ಹಷಂ ಉಮರಾಅ @ ಬಾಬು ಶೇಖ್ ವಿರುದ್ಧ ಕರ್ನಾಟಕ ರಾಜ್ಯದ ಪರವಾಗಿ ಶಿರಸಿ ಗ್ರಾಮಾಂತರ ಪೊಲೀಸ್ ಠಾಣೆ

ಕ್ರಿಮಿನಲ್ ಅಪೀಲುಸಂಖ್ಯೆ: 100281/2017,ದಿನಾಂಕ: 1 ನೇ ಜುಲೈ, 2020.

ತೀರ್ಪು

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ವಿಶೇಷ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ- (ಇದರಲ್ಲಿ ಇನ್ನು ಮುಂದೆ ಅಧಿವಿಚಾರಣಾ ನ್ಯಾಯಾಲಯವೆಂದು ಉಲ್ಲೇಖಿಸಲಾಗಿದೆ) ಇವರು ಭಾರತ ದಂಡ ಸಂಹಿತೆಯ (ಇದರಲ್ಲಿ ಇನ್ನು ಮುಂದೆ ಭಾ.ದ.ಸಂ.ಯೆಂದು ಉಲ್ಲೇಖಿಸಲಾಗಿದೆ) 376 ನೇ ಮತ್ತು 506 ನೇ ಪ್ರಕರಣಗಳ ಮೇರೆಗೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧಗಳ) ಅಧಿನಿಯಮ, 1989 ರ (ಇದರಲ್ಲಿ ಇನ್ನು ಮುಂದೆ ಅ.ಜಾ./ಅ.ಪಂ.ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3 ( i)(xii) ಮತ್ತು 3 ( 2) ( v) ರ ಪುರಣಗಳ ಮೇರೆಗಿನ ದಂಡನೀಯ ಅಪರಾಧಕ್ಕಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿ ವಿಶೇಷ ಮೊಕದ್ದಮೆ ಸಂಖ್ಯೆ:26/2014,ದಿನಾಂಕ: 11.07.2017 ರಲ್ಲಿ ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ಆದೇಶದಿಂದ ಬಾಧಿತನಾಗಿ, ಅರ್ಜಿದಾರ/ಆಪಾದಿತನು ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾನೆ.ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 ರ (ಇದರಲ್ಲಿ ಇನ್ನು ಮುಂದೆ ' ಪೊಕ್ಸೊ ಅಧಿನಿಯಮ ' ವೆಂದು ಉಲ್ಲೇಖಿಸಲಾಗಿದೆ) 4 ನೇ ಮತ್ತು 6 ನೇ ಪ್ರಕರಣಗಳ ಮೇರೆಗೆ ದಂಡನೀಯವಾಗಬಹುದಾದ ಅಪರಾಧಗಳಿಗಾಗಿ ಅಪೀಲುದಾರ-ಆಪಾದಿತನನ್ನು ನಿರಪರಾಧಿಯೆಂದು ಖುಲಾಸೆ ಮಾಡಲಾಗಿದೆ.

2. ಅಪೀಲುದಾರ-ಆಪಾದಿತರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಕೆ.ಎಂ. ಶಿರಳ್ಳಿ ಮತ್ತು ಪ್ರತಿವಾದಿ ರಾಜ್ಯದ ಪರ ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರಾದ ಶ್ರೀ ವಿ.ಎಂ. ಬಣಕಾರ್ರವರ ವಾದಗಳನ್ನು ನಾವು ಆಲಿಸಿರುತ್ತೇವೆ.

3. ಪ್ರಾಸಿಕ್ಯೂಷನ್ನ ವಾದದ ಸಾರಾಂಶ ಹೀಗಿದೆ:ಸಂತ್ರಸ್ಥ ಫಿರ್ಯಾದುದಾರಳು ಅಪ್ರಾಪ್ತ ವಯಸ್ಕಳಾಗಿದ್ದು, ಅನುಸೂಚಿತ ಜಾತಿಗೆ ಸೇರಿದವಳು.ಅವಳು 8 ನೇ ತರಗತಿಯಲ್ಲಿ ಓದುತ್ತಿದ್ದಳು ಮತ್ತು ಶಾಲಾ ರಜಾದಿನಗಳಲ್ಲಿ ಗೋಡಂಬಿ ಬೀಜಗಳನ್ನು ಬಿಡಿಸಿ ಸ್ವಚ್ಛ ಮಾಡಲು ಮತ್ತು ಕತ್ತರಿಸಲು, ಅವಳು ಆರೋಪಿಯ ಮನೆಗೆ ಹೋಗುತ್ತಿದ್ದಳು.ಫಿರ್ಯಾದುದಾರಳು, ಆಪಾದಿತನ ಮನೆಗೆ ಕೆಲಸಕ್ಕೆ ಹೋಗುತ್ತಿದ್ದಾಗ ಅವನು ಅವಳನ್ನು ಚುಡಾಯಿಸುತ್ತಿದ್ದನು ಮತ್ತು ಅವಳ ಮೈಮೇಲೆ ಕೈ ಇಟ್ಟು ಅಸಭ್ಯವಾಗಿ ವರ್ತಿಸುತ್ತಿದ್ದನು ಎಂದು ಆರೋಪಿಸಲಾಗಿದೆ.ಅಲ್ಲದೆ,ದಿನಾಂಕ: 02.02.2014 ರಂದು ಭಾನುವಾರವಾಗಿದ್ದರಿಂದ, ಸುಮಾರು ಮಧ್ಯಾಹ್ನ

02.30 ಗಂಟೆಗೆ ಗೋಡಂಬಿ ಬೀಜಗಳನ್ನು ಬಿಡಿಸುವುದಕ್ಕಾಗಿ ಸಂತ್ರಸ್ತೆ ಬಾಲಕಿಯು ಆಪಾದಿತನ ಮನೆಗೆ ಹೋಗಿದ್ದಾಗ, ಮನೆಯಲ್ಲಿ ಯಾರೂ ಇರಲಿಲ್ಲ ಮತ್ತು ಆ ಸಮಯದಲ್ಲಿ, ಆಪಾದಿತನು ತನ್ನ ಲೈಂಗಿಕ ಬಯಕೆಯನ್ನು ಪೂರೈಸಿಕೊಳ್ಳುವ ಉದ್ದೇಶದಿಂದ ಸ್ನಾನದ ಕೋಣೆಯಲ್ಲಿ ಸ್ವಲ್ಪ ಗೋಡಂಬಿ ಬೀಜಗಳಿವೆ ಎಂದು ಫಿರ್ಯಾದುದಾರಳಿಗೆ ತಿಳಿಸಿ, ಒಳಗೆ ಹೋಗಿ ಅವುಗಳನ್ನು ಬಿಡಿಸುವಂತೆ ಹೇಳಿದ, ಆಪಾದಿತನ ಮಾತನ್ನು ನಂಬಿ ಫಿರ್ಯಾದುದಾರಳು ಒಳಗೆ ಹೋದಾಗ, ತರುವಾಯ ಆಪಾದಿತನು ಕೂಡ ಒಳಗಡೆ ಹೋಗಿ, ಅವಳನ್ನು ಬಿಡುವುದಿಲ್ಲವೆಂದು ಹೇಳಿ ಅವಳ ಮೇಲೆ ಮರ್ಮಾಂಗಭೇದಕ ಲೈಂಗಿಕ ಅತ್ಯಾಚಾರವೆಸಗಿದ್ದ.ತದನಂತರ, ಅವಳಿಗೆ ಆಪಾದಿತನು ಈ ಘಟನೆಯನ್ನು ಎಲ್ಲೂ ಹೇಳಬಾರದೆಂದು ಜೀವಬೆದರಿಕೆ ಒಡ್ಡಿದ.ತರುವಾಯ ಫಿರ್ಯಾದುದಾರಳು ಗರ್ಭಿಣಿಯಾದಳು.ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯ ಶಾರೀರಿಕ ಬದಲಾವಣೆಗಳನ್ನು ಗಮನಿಸಿದ ಅವಳ ತಾಯಿಯು ಸಂತ್ರಸ್ತೆಯನ್ನು ವಿಚಾರಿಸಿದಾಗ, ಅವಳಿಗೆ ಆಪಾದಿತನ ಕೃತ್ಯದ ಬಗ್ಗೆ ತಿಳಿದುಬಂತು.ನಂತರ ಫಿರ್ಯಾದುದಾರಳು ದೂರನ್ನು ದಾಖಲಿಸಿದ್ದಳು.ಫಿರ್ಯಾದುದಾರಳ ದೂರಿನ ಆಧಾರದ ಮೇಲೆ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧಸಂಖ್ಯೆ: 118/2014 ರಲ್ಲಿ ಮೊಕದ್ದಮೆಯನ್ನು ದಾಖಲಿಸಲಾಯಿತು ಮತ್ತು ವಿಚಾರಣೆಯ ತರುವಾಯ ದೋಷಾರೋಪಣ ಪಟ್ಟಿಯನ್ನು ದಾಖಲು ಮಾಡಲಾಯಿತು.

4. ಅಪೀಲುದಾರ/ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು ಅಧಿವಿಚಾರಣಾ ನ್ಯಾಯಾಲಯವು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 1) (xii) ಮತ್ತು 3 ( 2) ( v) ರ ಪ್ರಕರಣಗಳ ಮೇರೆಗೆ ದಂಡನೀಯವಾಗಬಹುದಾದ ಅಪರಾಧಗಳಿಗಾಗಿ ಆಪಾದಿತನನ್ನು ಅಪರಾಧಿಯೆಂದು ತೀರ್ಮಾನಿಸುವಲ್ಲಿ ಗಂಭೀರ ಪ್ರಮಾದವೆಸಗಿದೆ ಎಂದು ನಿವೇದಿಸಿರುತ್ತಾರೆ.ಮುಂದುವರೆಸುತ್ತಾ, ಅಧಿವಿಚಾರಣಾ ನ್ಯಾಯಾಲಯವು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 1) (xii) ರ ಪ್ರಕರಣಗಳ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದಂತೆ ಮಾತ್ರ ಆರೋಪವನ್ನು ರೂಪಿಸಿದೆ.ಆದರೆ, ಅಧಿವಿಚಾರಣಾ ನ್ಯಾಯಾಲಯವು ತೀರ್ಪನ್ನು ನೀಡುವಾಗ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣಗಳ ಮೇರೆಗೆ ದಂಡನೀಯವಾಗಬಹುದಾದ ಅಪರಾಧಕ್ಕೆ ಅಪೀಲುದಾರ-ಆಪಾದಿತನನ್ನು ಅಪರಾಧಿಯೆಂದು ತೀರ್ಮಾನಿಸಿ ಅವನನ್ನು ಆಜೀವ ಕಾರವಾಸ ಶಿಕ್ಷೆಗೆ ಮತ್ತು ತಪ್ಪಿತ ಶಿಕ್ಷೆಯೊಂದಿಗೆ 10,000/-ರೂಪಾಯಿಗಳ ದಂಡವನ್ನು ಸಂದಾಯ ಮಾಡುವ ಶಿಕ್ಷೆಗೆ ಒಳಪಡಿಸಿದೆ ಎಂದು ನಿವೇದಿಸಿರುತ್ತಾರೆ.

5. ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸುತ್ತಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( V) ರ ಪ್ರಕರಣಗಳ ಮೇರೆಗೆ ಅಪರಾಧವನ್ನು ರೂಪಿಸದಿದ್ದಾಗ, ಅಂತಹ ಸಂದರ್ಭದಲ್ಲಿ, ಆರೋಪಿತ ಆಪಾದನೆಗಳಿಗಾಗಿ ಅಧಿವಿಚಾರಣಾ ನ್ಯಾಯಾಲಯವು ಅವನನ್ನು ಅಪರಾಧಿಯೆಂದು ತೀರ್ಮಾನಿಸಬಾರದಿತ್ತು.ಅಲ್ಲದೆ ಯುಕ್ತ ದೋಷಾರೋಪವನ್ನು ರೂಪಿಸದಿದ್ದರೆ ಆತನನ್ನು ಯಾವ ಅಪರಾಧಕ್ಕಾಗಿ ಅಧಿವಿಚಾರಣೆಗೆ ಒಳಪಡಿಸಲಾಗುತ್ತಿದೆ ಎಂಬ ಅಪರಾಧದ ಸಂಗತಿಗಳು ಅವನಿಗೆ ತಿಳಿಯುವುದಿಲ್ಲ.ಒಂದು ನಿರ್ದಿಷ್ಟವಾದ ಆಪಾದನೆಯನ್ನು ರೂಪಿಸದ ಹೊರತು, ಆಪಾದಿತನನ್ನು ಕತ್ತಲೆ ಅಥವಾ ಗೊಂದಲದಲ್ಲಿ ಇಟ್ಟಂತಾಗುತ್ತದೆ.ಅಂತಹ ಸನ್ನಿವೇಶಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಆಪಾದಿತನನ್ನು

ತಪ್ಪಿತಸ್ಥನೆಂದು ಅಪರಾಧ ನಿರ್ಣಯ ಮಾಡಬಾರದಾಗಿತ್ತು.ಈ ಎಲ್ಲ ಕಾರಣಗಳ ಮೇಲೆ, ಸದರಿ ವಿಷಯವನ್ನು ತೀರ್ಮಾನಿಸುವವರೆಗೆ ಮತ್ತು ತೀರ್ಮಾನಿಸದ ಹೊರತು, ಗುಣಾರ್ಹತೆ ಆಧಾರದ ಮೇಲೆ ಮಾಡಿದ ಇತರ ಕಾರಣಗಳ ಮೇಲೆ ತಮ್ಮ ವಾದಗಳನ್ನು ಮಂಡಿಸಲು ಸಾಧ್ಯವಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.ಮುಂದುವರೆಸುತ್ತಾ, ವಿಷಯವನ್ನು ಪುನರ್ವಿಚಾರಣೆಗಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳಿಸಿದ್ದರೆ ಮತ್ತು ಯುಕ್ತ ದೋಷಾರೋಪಣೆಯನ್ನು ರೂಪಿಸಿದ ನಂತರ ಮತ್ತು ಆಪಾದಿತನಿಗೆ ಸಂಪೂರ್ಣವಾದ ಅವಕಾಶ ನೀಡಿದ ನಂತರ, ಗುಣಾರ್ಹತೆಯ ಆಧಾರದ ಮೇಲೆ ಮೊಕದ್ದಮೆಯನ್ನು ನಿರ್ಧರಿಸಿದರೆ, ಆಗ ಅದು ನ್ಯಾಯೋದ್ದೇಶವನ್ನು ಈಡೇರಿಸಿದಂತಾಗುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ ಮತ್ತು ಈ ಕಾರಣಗಳ ಆಧಾರದ ಮೇಲೆ ಅಪೀಲನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ.

6. ಇದಕ್ಕೆ ತದ್ವಿರುದ್ಧವಾಗಿ, ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರು ದೋಷಾರೋಪಣೆಯನ್ನು ರೂಪಿಸದಿರುವುದು ಪ್ರಾಸಿಕ್ಯೂಷನ್ನ ವಾದಕ್ಕೆ ನಿರ್ಣಾಯಕವಾಗುವುದಿಲ್ಲ.ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದ ಪ್ರಕಾರ, ಭಾರತದ ದಂಡ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಅಧಿವಿಚಾರಣೆ ಮಾಡಲಾಗಿರುವ ಅಪರಾಧಕ್ಕಾಗಿ ಆಪಾದಿತನ ಅಪರಾಧವನ್ನು ನಿರ್ಣಯ ಮಾಡಲಾಗುತ್ತಿದೆ.ಅಂಥ ಅಪರಾಧಗಳಲ್ಲಿನ ಶಿಕ್ಷೆಯು ಪ್ರಧಾನವಾಗಿದ್ದರೆ ಮತ್ತು 10 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ಕಾರಾವಾಸ ಶಿಕ್ಷೆ ಅಥವಾ ಆಜೀವಾವಧಿ ಶಿಕ್ಷೆಯಾಗಿದ್ದರೆ, ಅಂತಹ ಸನ್ನಿವೇಶಗಳಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣವನ್ನು ಅನ್ವಯಿಸಲಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 222 ನೇ ಪ್ರಕರಣದ ಪ್ರಕಾರ, ಕೆಲವು ವಿವರಗಳನ್ನು ಒಳಗೊಂಡಿರುವ ದೋಷಾರೋಪಣೆ ಮಾಡಲಾದ ಅಪರಾಧದಲ್ಲಿ ರುಜುವಾತುಪಡಿಸಲಾದ ಅಪರಾಧವನ್ನು ಸೇರಿಸಿದಾಗ ಅವುಗಳಲ್ಲಿ ಕೆಲವು ಮಾತ್ರ ಲಘು ಅಪರಾಧಗಳಾಗುತ್ತವೆ ಮತ್ತು ಅಂತಹ ಸಂಯೋಜನೆಯನ್ನು ಸಾಬೀತುಪಡಿಸಿದರೂ, ಉಳಿದ ವಿವರಗಳು ಸಾಬೀತಾಗದೆ ಉಳಿದಾಗ, ಅವನ ಮೇಲೆ ದೋಷಾರೋಪಣೆಯನ್ನು ಮಾಡಿಲ್ಲದಿದ್ದರೂ ಸಹ ಅವನನ್ನು ಲಘು ಅಪರಾಧದ ಅಪರಾಧಿಯೆಂದು ನಿರ್ಣಯಿಸಬಹುದು.

7. ಅಪೀಲುದಾರ ಆರೋಪಿಯು, ಪ್ರಾರಂಭದಲ್ಲಿಯೇ ಸದರಿ ವಿವಾದಾಂಶವನ್ನು ಎತ್ತಲಿಲ್ಲ.ಈ ವಿಷಯವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಪುನರ್ವಿಚಾರಣೆಗಾಗಿ ವಾಪಸ್ಸು ಕಳುಹಿಸಲಾಗಿದ್ದರೆ, ಇನ್ನಷ್ಟು ಸಮಯವನ್ನು ತೆಗೆದುಕೊಳ್ಳಬಹುದು ಮತ್ತು ಎಲ್ಲಾ ಸಾಕ್ಷಿಗಳನ್ನು ಪಡೆಯುವುದು ಮತ್ತು ಮೊಕದ್ದಮೆಯನ್ನು ಮತ್ತೊಮ್ಮೆ ಮರುವಿಚಾರಣೆಯನ್ನು ಮಾಡುವುದು ಕೂಡ ಭಗೀರಥ ಪ್ರಯತ್ನವಾಗಿದೆ ಎಂದು ನಿವೇದಿಸಿಕೊಳ್ಳುತ್ತಾ, ಈ ಕಾರಣಗಳ ಆಧಾರದ ಮೇಲೆ ತನ್ನ ಅಪೀಲನ್ನು ವಜಾಗೊಳಿಸಲು ಕೋರಿರುತ್ತಾರೆ.

8. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಾಡಿದ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಪರಿಶೀಲಿಸಿರುತ್ತೇವೆ ಮತ್ತು ದಾಖಲೆಗಳನ್ನು ಅವಲೋಕಿಸಿರುತ್ತೇವೆ.

9. ಅಪರೂಪದ ಪ್ರಕರಣಗಳಲ್ಲಿ ಮಾತ್ರ ಮೊಕದ್ದಮೆಗಳನ್ನು ಹಿಂದಕ್ಕೆ ಕಳುಹಿಸಬೇಕಾಗಿದೆ.ನ್ಯಾಯಾಲಯವು ಮಂಡಿಸಿದ ಸಾಕ್ಷ್ಯಾಧಾರಗಳನ್ನು ಸೂಕ್ತವಾಗಿ ವಿಶ್ಲೇಷಿಸಿದ ನಂತರ, ಅದು ಪ್ರಸ್ತುತ ವಿಷಯದ ಬಗ್ಗೆ ತೀರ್ಪು

ನೀಡಬೇಕಾಗುತ್ತದೆ ಎಂಬ ಅಂಶದ ಬಗ್ಗೆ ನಾವು ಜಾಗರೂಕರಾಗಿರುತ್ತೇವೆ.ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) (    v) ರ ಪ್ರಕರಣಗಳ ಮೇರೆಗೆ ದಂಡನೀಯವಾಗಬಹುದಾದ ಅಪರಾಧಕ್ಕಾಗಿ ಯಾವುದೇ ಆಪಾದನೆಯನ್ನು ರೂಪಿಸಿರುವುದಿಲ್ಲವೆಂದು ಮತ್ತು ತರುವಾಯದ ಹಂತದಲ್ಲಿ, ಆಜೀವ ಕಾರಾವಾಸದ ಶಿಕ್ಷೆಯೊಂದಿಗೆ ದಂಡಿಸಬಹುದಾಗಿರುವ ಆಪಾದಿಸಲಾದ ಅಪರಾಧಕ್ಕಾಗಿ ಆಪಾದಿತನಿಗೆ ಶಿಕ್ಷೆ ಎ ವಿಧಿಸಲಾಗಿರುವುದರಿಂದ ಅವನಿಗೆ ಹೆಚ್ಚು ಹಾನಿಯು ಂ ಟಾಗಿದೆ ಎ ಂ ದು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.

10. ನ್ಯಾಯಾಲಯವು ಆಪಾದಿತನನ್ನು ಯಾವ ಆರೋಪಗಳಿಗಾಗಿ ಅಧಿವಿಚಾರಣೆ ಮಾಡಲು ಹೊರಟಿದೆಯೋ ಅಂಥ ಖಚಿತ ಆಪಾದನೆಗಳ ಬಗ್ಗೆ ಆಪಾದಿತನಿಗೆ ಸ್ಪಷ್ಟವಾದ ನೋಟೀಸನ್ನು ನೀಡುವ ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಆರೋಪವನ್ನು ರೂಪಿಸಬೇಕಾಗಿರುವುದು ಅವಶ್ಯವಾಗಿದೆ.

11.ದಿನಾಂಕ: 27-10-2014ರಂದು ಆಪಾದಿತನ ವಿರುದ್ಧವಾಗಿ ಪ್ರಸ್ತುತ ಮೊಕದ್ದಮೆಯಲ್ಲಿ ಆರೋಪಗಳನ್ನು ರೂಪಿಸುವಾಗ, ಭಾರತದ ದಂಡ ಸಂಹಿತೆಯ 376 ನೇ ಮತ್ತು 506 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳ ಜೊತೆಗೆ ಮತ್ತು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 1) (xiii) ರ ಪ್ರಕರಣಗಳ ಮೇರೆಗೆ ಹಾಗೂ ಪೈ ಅಧಿನಿಯಮದ 4 ನೇ ಪ್ರಕರಣದ ಅಡಿಯಲ್ಲಿನ ದಂಡನೀಯವಾಗಬಹುದಾದ ಅಪರಾಧಗಳಿಗಾಗಿ ಅಪರಾಧಕ್ಕಾಗಿ ಮಾತ್ರ ಇದನ್ನು ರೂಪಿಸಲಾಗಿತ್ತು ಎಂಬುದನ್ನು ಒಪ್ಪಿಕೊಳ್ಳಲಾಗಿದೆ.ತೀರ್ಪನ್ನು ಅವಲೋಕಿಸಿದ ತರುವಾಯ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಪರಿಗಣನೆಗಾಗಿ ನಾಲ್ಕು ಅಂಶಗಳನ್ನು ಎತ್ತಿದ್ದು, ಅದರಲ್ಲಿ ಮೂರನೆಯ ಅಂಶವನ್ನು ಈ ಮುಂದಿನಂತೆ ಓದಲಾಗಿದೆ.

" 3) ಈ ಹಿಂದೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಪಾದಿತನು, ಫಿರ್ಯಾದುದಾರಳು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವಳೆಂದು ಚೆನ್ನಾಗಿ ತಿಳಿದಿದ್ದೂ, ಅವಳ ಮೇಲೆ ಬಲವಂತವಾಗಿ ಲೈಂಗಿಕ ಅತ್ಯಾಚಾರ ಎಸಗಿ ಆಕೆಯನ್ನು ಗರ್ಭಿಣಿಯಾಗುವಂತೆ ಮಾಡಿದ್ದಾನೆ ಮತ್ತು ಆ ಮೂಲಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 1)    (xii) ಮತ್ತು 3 ( 2) (    v) ರ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ಎಸಗಿರುವನೆಂದು ಎಲ್ಲ ಯುಕ್ತ ಸಂದೇಹಗಳನ್ನು ಮೀರಿ ಪ್ರಾಸಿಕ್ಯೂಷನ್ ರುಜುವಾತುಪಡಿಸಿದೆಯೇ?

12. ಅಧಿವಿಚಾರಣಾ ನ್ಯಾಯಾಧೀಶರು ರೂಪಿಸಿದ ಮೇಲಿನ ಸದರಿ ಹೇಳಿಕೆಯನ್ನು ಪರಿಶೀಲಿಸಿದಾಗ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 1) (xii) ರ ಪ್'ರಕರಣಗಳ ಮೇರೆಗೆ ರೂಪಿಸಲಾದ ಆರೋಪವನ್ನು ಅವರು ಪರಿಗಣನೆಗೆ ತೆಗೆದುಕೊಂಡಿದ್ದಾರೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲವಾದರೂ, ಆಪಾದಿಸಲಾದ ಅಪರಾಧಕ್ಕಾಗಿ ಯಾವುದೇ ಆರೋಪವನ್ನು ರೂಪಿಸದಿದ್ದಾಗ್ಯೂ ಸಹ, ತೀರ್ಪನ್ನು ನೀಡುವಾಗ ಅವರು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) (     v) ರ ಪ್ರಕರಣವನ್ನು ಸೇರಿಸಿದ್ದಾರೆ.ಅಂತಹ ಸನ್ನಿವೇಶಗಳಲ್ಲಿ ಆಪಾದಿತನಿಗೆ, ತನ್ನನ್ನು ಯಾವ ಅಪರಾಧಕ್ಕಾಗಿ ವಿಚಾರಣೆ ಮಾಡಲು ಹೊರಟಿದ್ದಾರೆ ಮತ್ತು ತರುವಾಯ ಯಾವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣಯಿಸುತ್ತಾರೆ ಎಂಬ ಸಂಗತಿ ಖಂಡಿತವಾಗಿಯೂ ತಿಳಿಯುವುದಿಲ್ಲ.ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ

(ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣಗಳ ಮೇರೆಗೆ ನೀಡಲಾಗಿರುವ ಅಪರಾಧ ನಿರ್ಣಯವು ಪ್ರಮುಖ ಶಿಕ್ಷೆಯಾಗಿದ್ದು, ಇದು ಆಜೀವಾವಧಿ ಕಾರವಾಸ ಶಿಕ್ಷೆಯನ್ನು ಒಳಗೊಂಡಿರುತ್ತದೆ.

13. ಆಪಾದನೆಯನ್ನು ರೂಪಿಸುವುದನ್ನು ಕೈಬಿಟ್ಟರೆ ಯಾವ ರೀತಿ ಪರಿಣಾಮವುಂಟಾಗುತ್ತದೆ ಎಂಬುದನ್ನು ಈಗ ನಾವು ಪರಿಶೀಲಿಸಬೇಕಾಗಿದೆ.ಅದನ್ನು ಪರಿಶೀಲಿಸುವ ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆಯ 464 ನೇ ಪ್ರಕರಣವನ್ನು ಪರಾಮರ್ಶಿಸುವುದು ನ್ಯಾಯೋಚಿತವಾಗಿದೆಯೆಂದು ಭಾವಿಸುತ್ತೇವೆ.ಅದನ್ನು ಕೆಳಗಿನಂತೆ ಓದಲಾಗಿದೆ:

“464. ಆರೋಪ ರಚನೆಯಲ್ಲಿ ಲೋಪ ಅಥವಾ ಆರೋಪ ಇಲ್ಲದಿರುವುದು ಅಥವಾ ಆರೋಪದಲ್ಲಿ ತಪ್ಪು ಇವುಗಳ ಪರಿಣಾಮ.( 1) ಯಾವ ಆರೋಪವನ್ನು ರಚಿಸಿಲ್ಲವೆಂಬ ಕಾರಣದಿಂದ ಮಾತ್ರವೇ ಅಥವಾ ಆರೋಪಗಳ ತಪ್ಪು ಸಂಯೋಜನೆಯನ್ನೊಳಗೊಂಡು ಆರೋಪದಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಅಕ್ರಮದ ಕಾರಣದಿಂದ ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣೆಯ ನ್ಯಾಯಾಲಯವು ನ್ಯಾಯ ವಿಫಲತೆಯು ವಾಸ್ತವವಾಗಿ ಅದರಿಂದ ಸಂಭವಿಸಿತೆಂದು ಅಭಿಪ್ರಾಯಪಟ್ಟ ಹೊರತು, ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯದ ಯಾವ ನಿರ್ಣಯವೂ, ದಂಡಾದೇಶವೂ ಅಥವಾ ಆದೇಶವೂ ವಿಧಿಮಾನ್ಯವಲ್ಲವೆಂದು ಭಾವಿಸತಕ್ಕದ್ದಲ್ಲ.

( 2) ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣೆಯ ನ್ಯಾಯಾಲಯವು ನ್ಯಾಯ ವಿಫಲತೆಯು ವಾಸ್ತವವಾಗಿ ಸಂಭವಿಸಿತೆಂದು ಅಭಿಪ್ರಾಯಪಟ್ಟರೆ ಅದು.

(ಎ) ಆರೋಪವನ್ನು ರಚನೆ ಮಾಡದಿರುವ ಸಂದರ್ಭದಲ್ಲಿ, ಆರೋಪವನ್ನು ರಚಿಸಬೇಕೆಂದು ಮತ್ತು ಆರೋಪವನ್ನು ರಚಿಸಿದಲ್ಲಿಂದಲೇ ಆರೋಪ ವಿಚಾರಣೆಯನ್ನು ಪುನಃ ಪ್ರಾರಂಭಿಸಬೇಕೆಂದು ಆದೇಶಿಸಬಹುದು;

(ಬಿ) ಆರೋಪದಲ್ಲಿನ ತಪ್ಪು, ಲೋಪ ಅಥವಾ ಅಕ್ರಮದ ಸಂದರ್ಭದಲ್ಲಿ ರಚಿಸಿದ ಆರೋಪದ ಮೇಲೆ ತಾನು ಸೂಕ್ತವೆಂದು ಆಲೋಚಿಸಿದಂತೆ ಹೊಸ ಆರೋಪ ವಿಚಾರಣೆ ಮಾಡಬೇಕೆಂದು ನಿರ್ದೇಶಿಸಬಹುದು;

ಪರಂತು, ರುಜುವಾತಾದ ಸಂಗತಿಗಳ ಬಗ್ಗೆ ಆಪಾದಿತನ ವಿರುದ್ಧ ಯಾವ ವಿಧಿಮಾನ್ಯ ಆರೋಪವನ್ನೂ ರಚಿಸಲಾಗದಂಥ ರೀತಿಯಲ್ಲಿ ಮೊಕದ್ದಮೆಯ ಸಂಗತಿಗಳು ಇವೆಯೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಆ ಅಪರಾಧ ನಿರ್ಣಯವನ್ನು ರದ್ದುಗೊಳಿಸತಕ್ಕದ್ದು.

14. ಈ ಮೇಲಿನ ಸದರಿ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಮೇಲೆ ಅಪರಾಧಿಗೆ ಯಾವುದೇ ಹಾನಿ ಉಂಟಾಗಿದ್ದರೆ, ಆರೋಪವನ್ನು ರೂಪಿಸದಿರುವುದು ಅಪರಾಧ ನಿರ್ಣಯದ ತೀರ್ಪನ್ನು ನಿರರ್ಥಕಗೊಳಿಸುವುದಿಲ್ಲ ಮತ್ತು ನ್ಯಾಯ ವೈಫಲ್ಯತೆ ಉಂಟಾಗುವುದಿಲ್ಲ.ಅಪೀಲು ನ್ಯಾಯಾಲಯವು, ನ್ಯಾಯದ ವೈಫಲ್ಯವು ವಾಸ್ತವವಾಗಿ ಉಂಟಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ, ಅದು ಆರೋಪವನ್ನು ರೂಪಿಸಿ ಮರುವಿಚಾರಣೆ ನಡೆಸಲು ಆದೇಶಿಸಬಹುದು.ನ್ಯಾಯದ ವೈಫಲ್ಯ ಉಂಟಾಗಿದೆಯೇ ಅಥವಾ ಇಲ್ಲವೇ ಎಂದು ನಿರ್ಣಯಿಸಲು, ನ್ಯಾಯಾಲಯವು, ಆಪಾದಿತನು ತನಗೆ ಯಾವ ಅಪರಾಧಕ್ಕಾಗಿ ಶಿಕ್ಷೆ ನಿರ್ಣಯಿಸಲಾಗಿದೆ ಎಂದು ತಿಳಿದುಕೊಳ್ಳಲು ಅಪರಾಧದ ಮೂಲ ಘಟಕಾಂಶಗಳ ಬಗ್ಗೆ ತಿಳಿದಿದ್ದನೇ ಮತ್ತು

ಅಪರಾಧಿಯೂ ಸ್ವತಃ ತನ್ನನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗುವಂತೆ ಸಂಬಂಧಪಟ್ಟ ಸಂಗತಿಗಳನ್ನು ಅವನಿಗೆ ವಿವರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಕಾನೂನಿನ ಈ ಪ್ರಸ್ತಾವನೆಯನ್ನು, ದರ್ ಸಿಂಘ್ -ವಿರುದ್ಧ-ಉತ್ತರ ಪ್ರದೇಶ ರಾಜ್ಯ ಎಐಆರ್ 2004 ಎಸ್ಸಿ 1990 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವಿಸಿದ್ದು, ಚ ಅದರ 17 ನೇ ಕಂಡಿಕೆಯು ಈ ಕೆಳಗಿನಂತಿದೆ:

"17. ಅದೇ ರೀತಿ, ಈ ನ್ಯಾಯಾಲಯದ ನಿರ್ಣಯಗಳ ಸರಣಿಯೇ ಇದೆ ಮತ್ತು ಅವುಗಳಲ್ಲಿ ಪ್ರತಿಯೊಂದನ್ನು ಉಲ್ಲೇಖಿಸುವ ಮೂಲಕ ಈ ತೀರ್ಪನ್ನು ಭಾರಗೊಳಿಸುವ ಅವಶ್ಯಕತೆ ಇಲ್ಲ. ಆದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 464 ನೇ ಪ್ರಕರಣದ ದೃಷ್ಟಿಯಲ್ಲಿ, ಈ ನ್ಯಾಯಾಲಯವು ವಾಸ್ತವವಾಗಿ ನ್ಯಾಯ ವಿಫಲತೆಯು ಉಂಟಾಗುತ್ತದೆಯೆಂದು ಅಭಿಪ್ರಾಯ ಪಡದ ಹೊರತು, ಯಾವ ಅಪರಾಧಕ್ಕೆ ಆರೋಪವನ್ನು ರೂಪಿಸಲಾಗಲಿಲ್ಲವೋ ಅಂಥ ಅಪರಾಧಕ್ಕಾಗಿ ಆಪಾದಿತನಿಗೆ ಅಪರಾಧ ನಿರ್ಣಯಿಸಲು ಅಪೀಲು ನ್ಯಾಯಾಲಯ ಅಥವಾ ಪುನರೀಕ್ಷಣಾ ನ್ಯಾಯಾಲಯಕ್ಕೆ ಸಾಧ್ಯವಾಗುತ್ತದೆ.ನ್ಯಾಯ ವಿಫಲತೆಗೆ ಅವಕಾಶ ಕಲ್ಪಿಸಲಾಗಿದೆಯೇ ಎಂಬುದನ್ನು ನಿರ್ಣಯಿಸುವ ಸಲುವಾಗಿ, ಆಪಾದಿತನಿಗೆ ಯಾವ ಅಪರಾಧಕ್ಕಾಗಿ ಅಪರಾಧ ನಿರ್ಣಯ ಮಾಡಲಾಗುತ್ತಿದೆ ಎಂಬ ಅಪರಾಧದ ಮೂಲ ಸಂಗತಿಗಳ ಬಗ್ಗೆ ಆತನಿಗೆ ತಿಳಿದಿತ್ತೆ?ಮತ್ತು ಆತನ ವಿರುದ್ಧ ಸುಸ್ಥಾಪಿಸಬೇಕೆಂದು ಕೋರಲಾದ ಮುಖ್ಯ ಅಂಶಗಳ ಬಗ್ಗೆ ಅವನಿಗೆ ಸ್ಪಷ್ಟವಾಗಿ ವಿವರಿಸಲಾಗಿತ್ತೆ?ಮತ್ತು ಅವನಿಗೆ ಸ್ವತಃ ತನ್ನನ್ನು ರಕ್ಷಿಸಿಕೊಳ್ಳಲು ಯುಕ್ತ ಅವಕಾಶವನ್ನು ನೀಡಲಾಗಿತ್ತೆ?ಎ ಂ ಬುದನ್ನು ಬ ಪರಿಶೀಲಿಸುವುದು ಸೂಕ್ತ."

15. ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) (v) ರ ಪ್ರಕರಣವನ್ನು ಪರಿಶೀಲಿಸಿದ ತರುವಾಯ, ಮೇಲೆ ಹೇಳಿದ ಅನುಪಾತವನ್ನು ಗಮನದಲ್ಲಿಟ್ಟುಕೊಂಡು, ಈ ಕೆಳಗಿನಂತೆ ಓದಲಾಗುತ್ತದೆ:

" 3 ( 2) ( v) ಅಂಥ ವ್ಯಕ್ತಿಯು, ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನೆಂಬುದು ಅಥವಾ ಅಂಥ ಸ್ವತ್ತು ಅಂಥ ಸದಸ್ಯನಿಗೆ ಸೇರಿದೆಯೆಂಬುದು ಗೊತ್ತಿದ್ದೂ ಅಂಥ ವ್ಯಕ್ತಿ ಅಥವಾ ಅಂಥ ಸ್ವತ್ತಿನ ಬಗ್ಗೆ ಹತ್ತು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ, ಭಾರತ ದಂಡ ಸಂಹಿತೆ (1860 ರ 45) ಯ ಮೇರೆಗಿನ ಯಾವುದೇ ಅಪರಾಧವನ್ನು ಮಾಡಿದರೆ, ಅಜೀವ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.೨೨

16. ಈ ಪ್ರಕರಣಕ್ಕೆ ಅನುಸಾರವಾಗಿ, ಈ ಅಧಿನಿಯಮದ ಅಡಿಯಲ್ಲಿ ಬರುವ ವ್ಯಕ್ತಿಯ ವಿರುದ್ಧ ಹತ್ತು ಅಥವಾ ಅದಕ್ಕಿಂತಲೂ ಹೆಚ್ಚಿನ ವರ್ಷಗಳ ಅವಧಿಗೆ ದಂಡನೀಯವಾಗಬಹುದಾದ ಭಾರತ ದಂಡ ಸಂಹಿತೆಯ ಉಪಬಂಧಗಳ ಮೇರೆಗೆ ಆಪಾದಿತನು ಅಪರಾಧವನ್ನು ಎಸಗಿದ್ದಾನೆಂದು ಆಪಾದಿಸಲಾಗಿದ್ದರೆ, ಆತನಿಗೆ ಆಜೀವಾವಧಿ ಕಾರಾವಾಸ ಶಿಕ್ಷೆ ಮತ್ತು ಜುಲ್ಮಾನೆ ಶಿಕ್ಷೆಯನ್ನು ವಿಧಿಸತಕ್ಕದ್ದು.ಎ ಪ್ರಸ್ತುತ ಮೊಕದ್ದಮೆಯಲ್ಲಿ, ಆಪಾದಿತನು ಅನುಸೂಚಿತ ಜಾತಿಗೆ ಸೇರಿದ ಅಪ್ರಾಪ್ತ ಬಾಲಕಿಯ ಮೇಲೆ ಮರ್ಮಾಂಗಬೇಧಕ ಲೈಂಗಿಕ ಅತ್ಯಾಚಾರವನ್ನು ಎಸಗಿದ್ದಾನೆಂದು ಆಪಾದಿಸಲಾಗಿದೆ.ಈ ಅಪರಾಧವನ್ನುದಿನಾಂಕ: 02-02-2014ರಂದು ಮಾಡಲಾಗಿದೆ ಎಂದು ಹೇಳಲಾಗಿದೆ.ದಿನಾಂಕ: 21-04-2018ರಿಂದ ಜಾರಿಗೆ ಬಂದಿರುವ 2018 ರ ಅಧಿನಿಯಮಸಂಖ್ಯೆ: 22 ರ ಮೂಲಕ ಭಾರತದ ದಂಡ ಸಂಹಿತೆಗೆ ತಿದ್ದುಪಡಿ ತರುವುದಕ್ಕೆ ಮುಂಚೆ, ಪ್ರಶ್ನಿತ ಅಪರಾಧವು ಸಾಬೀತಾದರೆ, ತಿದ್ದುಪಡಿಗೆ ಮೊದಲು ಅದು ಇದ್ದಂತೆ ಭಾರತದ ದಂಡ ಸಂಹಿತೆಯ 376 ( 2) ( i)

ಪ್ರಕರಣದ ಮೇರೆಗೆ ಶಿಕ್ಷಾರ್ಹವಾಗಿದೆ ಮತ್ತು ನಿಗದಿಪಡಿಸಿದ ಕನಿಷ್ಠ ಶಿಕ್ಷೆ 10 ವರ್ಷಗಳಾಗಿದ್ದು, ಅದು ಆಜೀವ ಕಾರಾವಾಸದ ಶಿಕ್ಷೆಗೆ ವಿಸ್ತರಿಸಬಹುದಾಗಿದೆ.ಎಂದರೆ, ಆ ವ್ಯಕ್ತಿಯು ಸ್ವಾಭಾವಿಕ ಜೀವನದ ಉಳಿದ ಅವಧಿಗೆ ಮತ್ತು ಜುಲ್ಮಾನೆಯೊಂದಿಗೆ ಎಂದು ಅರ್ಥ. ಆದ್ದರಿಂದ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) (v) ಪ್ರಕರಣವು ಸ್ವಯಂಚಾಲಿತವಾಗಿ ಅನ್ವಯವಾಗುತ್ತದೆ.ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶಿಕ್ಷೆಯು ಆಜೀವ ಕಾರವಾಸ ಮತ್ತು ಜುಲ್ಮಾನೆಯೊಂದಿಗೆ ಶಿಕ್ಷೆಯಾಗಿರುತ್ತದೆ.ಅಂತಹ ಸನ್ನಿವೇಶಗಳಲ್ಲಿ ಅಂತಹ ಅಪರಾಧಕ್ಕಾಗಿ ಆಪಾದಿತನಿಗೆ ಅಧಿವಿಚಾರಣೆ ಮಾಡಲಾಗುವುದು ಎಂದು ಸೂಚಿಸುವ ಯಾವುದೇ ಅಪರಾಧವನ್ನು ರೂಪಿಸದಿದ್ದರೆ, ಅಪರಾಧ ಸಾಬೀತಾದಲ್ಲಿ ಅವನು ಆಜೀವ ಕಾರಾವಾಸ ಮತ್ತು ಜುಲ್ಮಾನೆಯೊಂದಿಗೆ ಶಿಕ್ಷೆಗೆ ಅರ್ಹನಾಗುತ್ತಾನೆ.ಅದನ್ನು ದಂಡ ಪ್ರಕ್ರಿಯಾ ಸಂಹಿತೆಯ 222 ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ, ಲಘು ಅಪರಾಧವೆಂದು ಪರಿಗಣಿಸಬಾರದು.ಆ ಹಿನ್ನೆಲೆಯಲ್ಲಿ, ಆರೋಪಿಯು, ಈ ಅಧಿನಿಯಮದ ಮೇರೆಗೆ ದಂಡನಾ ಉಪಬಂಧಗಳನ್ನು ಕೋರುವ ಮೂಲಕ ಖಂಡಿತವಾಗಿಯೂ ಪೂರ್ವಾಗ್ರಹ ಪೀಡಿತನಾಗಿದ್ದಾನೆ.ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದ ಮೇರೆಗೆ ನಿರ್ದಿಷ್ಟ ಆರೋಪವನ್ನು ರೂಪಿಸುವ ಮೂಲಕ ಮತ್ತು ಶಿಕ್ಷೆ ವಿಧಿಸುವ ಮೂಲಕ ಅವನಿಗೆ ತಿಳಿಸದೆ ತೀರ್ಪಿನ ಸಮಯದಲ್ಲಿ ಮಾತ್ರ ಅದನ್ನು ಸೇರಿಸಿದ್ದರೆ, ಅದು ಆಜೀವ ಕಾರಾವಾಸ ಮತ್ತು ಜುಲ್ಮಾನೆಯೊಂದಿಗೆ ದಂಡನೀಯವಾದ ಅಪರಾಧವಾಗಿದೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.

17. ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರುಗಳು, ಆರೋಪವನ್ನು ರೂಪಿಸುವುದರ ಪರಿಣಾಮವನ್ನು ತಿಳಿಯಲು ದಂಡ ಪ್ರಕ್ರಿಯಾ ಸಂಹಿತೆಯ 215 ನೇ ಪ್ರಕರಣವನ್ನು ಉಲ್ಲೇಖಿಸಿದ್ದರೂ, ದಂಡ ಪ್ರಕ್ರಿಯಾ ಸಂಹಿತೆಯ 215 ನೇ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಮೇಲೆ ಆರೋಪವನ್ನು ರೂಪಿಸಲು ತಪ್ಪಿದಲ್ಲಿ ಅದು ನ್ಯಾಯ ವೈಫಲ್ಯತೆಯಾಗಬಹುದು ಅಥವಾ ಆಗದಿರಬಹುದು ಎಂಬುದು ಸ್ಪಷ್ಟವಾಗುತ್ತದೆ.ಸಾಮಾನ್ಯವಾಗಿ, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳು, ಆ ಆರೋಪವನ್ನು ರೂಪಿಸದಿರುವಲ್ಲಿ ಅಥವಾ ತಪ್ಪಾಗಿ ರೂಪಿಸುವಲ್ಲಿ ನ್ಯಾಯದ ವೈಫಲ್ಯ ಉಂಟಾಗಿದೆಯೆಂದು ಸುಸ್ಥಾಪಿಸುವಂತಿದ್ದ ಹೊರತು ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ಅಂಥ ವಾದಗಳನ್ನು ಹೂಡುವುದನ್ನು ಪುರಸ್ಕರಿಸಬಾರದು.ಒಪ್ಪಿಕೊಂಡಿರುವಂತೆ, ದಾಖಲೆಗಳನ್ನು ಪರಿಶೀಲಿಸಿದ ಮೇಲೆ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದ ಮೇರೆಗೆ ಯಾವುದೇ ಆರೋಪವನ್ನು ರೂಪಿಸಿರುವುದಿಲ್ಲ. ಸರಿಯಾದ ಆರೋಪವನ್ನು ರೂಪಿಸದಿದ್ದರೆ ಮತ್ತು ಅದು ಆಪಾದಿತನ ತಿಳುವಳಿಕೆಗೆ ಬಂದಿರದಿದ್ದರೆ ಆಗ, ಅದು ಸ್ವತಃ ಆಪಾದಿತನಿಗೆ ಅನ್ಯಾಯವನ್ನು ಉಂಟು ಮಾಡುತ್ತದೆ ಮತ್ತು ಅದು ನ್ಯಾಯದ ವೈಫಲ್ಯವಲ್ಲದೆ ಮತ್ತೇನೂ ಅಲ್ಲ.

18. ಆಪಾದಿತನ ವಿರುದ್ಧ ಆರೋಪವನ್ನು ರೂಪಿಸಹೊರಟಾಗ ಅವನಿಗೆ ಯಾವ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆಯ ಮೇರೆಗೆ ಆಪಾದಿತಸಲಾದ ಆಪಾದನೆಯಲ್ಲಿ 10 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯವರೆಗೆ ದಂಡನೆ ಅಥವಾ ಕಾರಾವಾಸದೊಂದಿಗೆ ಶಿಕ್ಷೆ ವಿಧಿಸಲಾಗುತ್ತಿದೆ ಎಂಬ ಸಂಗತಿ ಆಪಾದಿತನಿಗೆ ತಿಳಿಯದಿರಬಹುದು ಎಂಬುದನ್ನು ದಾಖಲಿಸಬಯಸುತ್ತೇವೆ.ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದಿಂದ ತಿಳಿದುಬರುವಂತೆ, ಭಾರತ ದಂಡ ಸಂಹಿತೆಯ ಮೇರೆಗೆ ಅಪರಾಧವನ್ನು ಎಸಗಿದ್ದರೆ, ಮತ್ತು ಒಬ್ಬ ವ್ಯಕ್ತಿಯ ಅಥವಾ ಒಂದು ಸ್ವತ್ತಿನ

ವಿರುದ್ಧ 10 ವರ್ಷಗಳು ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯವರೆಗೆ ಕಾರಾವಾಸದೊಂದಿಗೆ ದಂಡನೀಯ ಶಿಕ್ಷೆ ವಿಧಿಸಿದ್ದರೆ, ಮತ್ತು ಅಂತಹ ವ್ಯಕ್ತಿಯು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದಾಗ, ನಂತರದ ಶಿಕ್ಷೆಯು ಜುಲ್ಮಾನೆಯೊಂದಿಗೆ ಆಜೀವ ಕಾರಾವಾಸ ಶಿಕ್ಷೆಯಾಗುತ್ತದೆ.ಆ ಹಿನ್ನೆಲೆಯಲ್ಲಿ, ಆಪಾದಿತನಿಗೆ 10 ವರ್ಷಗಳ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯವರೆಗೆ ಕಾರಾವಾಸದೊಂದಿಗೆ ದಂಡನೀಯವಾಗಬಹುದಾದ ಅಪರಾಧಕ್ಕಾಗಿ ಆರೋಪ ಹೊರಿಸಿದ್ದಾಗಲೆಲ್ಲಾ, ಅಂತಹ ಸಂದರ್ಭದಲ್ಲಿ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದ ಮೇರೆಗೆ ನಿರ್ದಿಷ್ಟ ಆಪಾದನೆಯನ್ನು ರೂಪಿಸಬೇಕು.ಇದರಿಂದ ಒಂದು ವೇಳೆ ಆಪಾದಿತನಿಗೆ 10 ವರ್ಷಗಳ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯವರೆಗೆ ಕಾರಾವಾಸದೊಂದಿಗೆ ದಂಡನೀಯವಾಗಿರುವ ಭಾರತ ದಂಡ ಸಂಹಿತೆಯ ಮೇರೆಗಿನ ಅಪರಾಧಕ್ಕಾಗಿ ಆತನನ್ನು ಅಪರಾಧವನ್ನು ನಿರ್ಣಯಿಸಿದರೆ, ಆಗ ಅವನು, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( v) ರ ಪ್ರಕರಣದ ಮೇರೆಗೆ ಸಹ ಆತನ ಅಪರಾಧ ನಿರ್ಣಯಿಸಿ ಶಿಕ್ಷೆ ವಿಧಿಸಲು ಅರ್ಹನಾಗಿದ್ದಾನೆಂದು ಅವನು ತಿಳಿದುಕೊಳ್ಳಲು ಅಥವಾ ಮಾಹಿತಿ ನೀಡಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಪರಿಗಣನೆಗಾಗಿ ಅಂಶಗಳನ್ನು ತೆಗೆದುಕೊಳ್ಳುವ ಮೊದಲು ಆಪಾದಿತ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸುವ ಮೊದಲು, ಸೂಕ್ತ ಆರೋಪವನ್ನು ರೂಪಿಸಬಹುದಾಗಿತ್ತು.ಅಥವಾ ಕನಿಷ್ಠ ಆಪಾದನೆಯ ಬಗ್ಗೆ ತಿಳಿಸಬಹುದಾಗಿತ್ತು ಮತ್ತು ಈ ಬಗ್ಗೆ ಅವನಿಗೆ ೧ ಅಹವಾಲು ಹೇಳಿಕೊಳ್ಳಬಹುದಿತ್ತು.

19. ಈ ಮೇಲೆ ಹೇಳಲಾದ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಆಪಾದಿತನಿಗೆ ಸಂಬಂಧಿಸಿದಂತೆ ನ್ಯಾಯ ವೈಫಲ್ಯವಾಗಿದೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.ಈ ಹಿನ್ನೆಲೆಯಲ್ಲಿ, ಕಾನೂನಿಗೆ ಅನುಗುಣವಾಗಿ ಸರಿಯಾದ ಆರೋಪವನ್ನು ರೂಪಿಸಬೇಕು ಎಂಬ ನಿರ್ದೇಶನದೊಂದಿಗೆ ಈ ವಿಷಯವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಬೇಕಾಗಿದೆ.ತದನಂತರ, ಪ್ರಾಸಿಕ್ಯೂಷನ್ನು ಯಾವುದೇ ಹೆಚ್ಚುವರಿ ಸಾಕ್ಷ್ಯವನ್ನು ಮುನ್ನಡೆಸಲು ಪ್ರಸ್ತಾಪಿಸಿದ್ದರೆ, ಮತ್ತು ಆಪಾದಿತನು ಅಂತ ಸಾಕ್ಷಿಗಳನ್ನು ಹೆಚ್ಚಿನ ಪಾಟೀ ಸವಾಲು ಮಾಡಲು ಬಯಸಿದರೆ, ಉಭಯ ಕಡೆಯ ಪಕ್ಷಕಾರರಿಗೆ ಅವಕಾಶವನ್ನು ನೀಡಬಹುದು.ತದನಂತರ, ಅಧಿವಿಚಾರಣಾ ನ್ಯಾಯಾಲಯವು, ಈಗಾಗಲೇ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಮತ್ತು ಈ ವಿಷಯದಲ್ಲಿ ಮುನ್ನಡೆಸಬಹುದಾದ ಹೆಚ್ಚಿನ ಸಾಕ್ಷ್ಯವನ್ನು ಪರಿಗಣಿಸಿ, ಕಾನೂನಿಗೆ ಅನುಸಾರವಾಗಿ ಈ ವಿಷಯವನ್ನು ವಿಲೆ ಮಾಡಬೇಕಾಗುತ್ತದೆ.

20. ಈ ನ್ಯಾಯಾಲಯವು, ಅನೇಕ ಸಾರಿ ಅಭಿಪ್ರಾಯ ಪಟ್ಟಿರುವಂತೆ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಅಧಿನಿಯಮದ ಮೇರೆಗೆ ಆಪಾದನೆಯನ್ನು ರೂಪಿಸುವಾಗ, ಮೇಲೆ ಅಭಿಪ್ರಾಯಪಡಲಾದಂತೆ ಸೂಕ್ತ ಆರೋಪಗಳನ್ನು ರೂಪಿಸದಿದ್ದರೆ, ಆ ಹಿನ್ನೆಲೆಯಲ್ಲಿ ಮೇಲ್ಕಂಡ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗೆ ಅನುಸಾರವಾಗಿ ಆರೋಪ| ಆರೋಪಗಳನ್ನು ರೂಪಿಸಲು ಸಾಧ್ಯವಾಗುವಂತೆ ಅಧಿವಿಚಾರಣಾ ನ್ಯಾಯಾಲಯಗಳಿಗೆ ಈ ತೀರ್ಪನ್ನು ಪರಿಚಲನೆ (Circulate) ಮಾಡುವಂತೆ ರಿಜಿಸ್ಟ್ರಿಯವರಿಗೆ ನಿರ್ದೇಶಿಸಲಾಗಿದೆ.

ಈ ತೀರ್ಪಿನ ಒಂದು ಪ್ರತಿಯನ್ನು ಈ ಸಂಬಂಧದಲ್ಲಿ ತರಬೇತಿ ಪಡೆಯುತ್ತಿರುವ 110 ಹಷಂ ಉಮರಾಅ @ ಬಾಬು ಶೇಖ್ -ವಿರುದ್ದ ಕರ್ನಾಟಕ ರಾಜ್ಯದ ಪರವಾಗಿ 645 ಶಿರಸಿ ಗ್ರಾಮಾಂತರ ಪೊಲೀಸ್ ಠಾಣೆ

ನ್ಯಾಯಾಧೀಶರುಗಳಿಗೆ ತಿಳುವಳಿಕೆ ನೀಡುವ ಸಲುವಾಗಿ ಕರ್ನಾಟಕ ನ್ಯಾಯಾಂಗ ಅಕಾಡೆಮಿಗೂ ಸಹ ಕಳುಹಿಸಬಹುದು.

ಮೇಲೆ ಹೇಳಲಾದ ಕಾರಣಗಳಿಗಾಗಿ ನಾವು ಈ ಕೆಳಕಂಡ ಆದೇಶವನ್ನು ಹೊರಡಿಸಿರುತ್ತೇವೆ:

ಆದೇಶ

1) ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.

1) ವಿಶೇಷ ಮೊಕದ್ದಮೆಸಂಖ್ಯೆ: 26/2014,ದಿನಾಂಕ: 11-07-2017ರಲ್ಲಿ ವಿಶೇಷ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ-ಇವರು ಜಾರಿ ಮಾಡಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ಈ ಮೂಲಕ ತಳ್ಳಿ ಹಾಕಿದೆ ಮತ್ತು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3 ( 2) ( V) ರ ಪ್ರಕರಣದ ಮೇರೆಗೆ ದ ಂ ಡನೀಯವಾಗಬಹುದಾದ ಅಪರಾಧಕ್ಕಾಗಿ ಸೂಕ್ತ ಆರೋಪವನ್ನು ರೂಪಿಸುವಂತೆ ಹಾಗೂ ಮೇಲೆ ಮಾಡಲಾದ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಉಭಯ ಪಕ್ಷಕಾರರಿಗೆ ಹೆಚ್ಚಿನ ಸಾಕ್ಷ್ಯವನ್ನು ಮಂಡಿಸುವಂತೆ ಸಲಹೆ ನೀಡಿದರೆ, ಅವರಿಗೆ ಹಾಗೆ ಮಾಡಲು ಅವಕಾಶ ನೀಡಿದ ನಂತರ ಕಾನೂನಿಗನುಸಾರವಾಗಿ ವಿಷಯವನ್ನು ವಿಲೆ ಮಾಡುವಂತೆ ನಿರ್ದೇಶಿಸಿ ಈ ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿದೆ.

III) ಅಧಿವಿಚಾರಣೆಯನ್ನು ತ್ವರಿತವಾಗಿ ನಡೆಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.